ಕಥೆ



**ಮೊಗಳ್ಳಿ ಗಣೇಶ**

ಕಲೆ: ವಿಶ್ವನಾಥ್ ಎ.ಎಸ್.

# ದಿ ಲಾಸ್ಟ್ ಸಪ್ಪರ್

ಆ ಬಡಪಾಯಿ ಎಲ್ಲವನ್ನೂ ಬಿಟ್ಟು ಬಂದಿದ್ದ ಎನ್ನುವುದಕ್ಕಿಂತ ಎಲ್ಲರೂ ಅವನನ್ನು ಬಿಟ್ಟಿದ್ದರು. ಜೊತೆಗೆ ಬಂದಿದ್ದವರೆಲ್ಲ ಹೇಗೆ ಮಧ್ಯ ದಾರಿಯಲ್ಲೇ ಬಿಟ್ಟು ಹೋಗುತ್ತಾರೆ ಎಂಬುದನ್ನು ತಿಳಿದಿದ್ದ. ಮುಗ್ಧನೋ ಬುದ್ಧಿವಂತನೋ ಗೊತ್ತೇ ಆಗುತ್ತಿರಲಿಲ್ಲ. ಹೊರಟಿದ್ದ ಗುರಿ ಇಲ್ಲದೆ ಏಕಾಂಗಿಯಾಗಿ. ಹೆದ್ದಾರಿಗಳು ರಣ ಗುಟ್ಟುತ್ತಿದ್ದವು. ಮನುಷ್ಯರು ಇಷ್ಟೊಂದು ವೇಗವಾಗಿ ಇಷ್ಟೆಲ್ಲಾ ವಾಹನಗಳಲ್ಲಿ ಎಲ್ಲಿಗೆ ಹೋಗುತ್ತಿದ್ದಾರೆಂದು ಅಂದಾಜಿಸಲು ಸಾಧ್ಯವಿರಲಿಲ್ಲ. ವಾಹನಗಳು ದಟ್ಟೈಸಿ ನಿಧಾನವಾಗಿ ಚಲಿಸುತ್ತಿದ್ದವು. ರಾಕ್ಷಸಾಕಾರದ ಥರಾವರಿ ಟ್ರಕ್ಕುಗಳು ಹಿಂದಿಕ್ಕಲು ಬುಸುಗುಟ್ಟುತ್ತಿದ್ದವು. ಅವು ಪೈಪೋಟಿಯಲ್ಲಿ ಸಾಗುವುದನ್ನು ನಿರಾಸಕ್ತಿಯಿಂದ ಆತ ಗಮನಿಸುತ್ತಾ ರಸ್ತೆಯ ಅಂಚಿನಲ್ಲೇ ನಡೆಯುತ್ತಿದ್ದ. ಒಂದರೆ ಕ್ಷಣ ಅಷ್ಟೇ... ವೇಗವಾಗಿ ನುಗ್ಗಿ ಬಂದ ಕಾರೊಂದು ಅವನಿಗೆ ಬಡಿದು ಹಾರಿ ಹೋಯಿತು. ಹಿಂದೆ ಮುಂದಿದ್ದ ವಾಹನಗಳು ನಿಯಂತ್ರಣ ತಪ್ಪಿ ಜಖಂಗೊಂಡವು. ಆತ ಉರುಳಾಡುತ್ತಿದ್ದ. ಅವನ ಕಣಕಾಲುಗೆಳೆರಡೂ ತುಂಡಾಗಿದ್ದವು. ರೋದಿಸುತ್ತಿದ್ದ. ಯಾರಾದರೂ ಇರುತ್ತಾರಲ್ಲಾ... ಯಾರೋ ಬಂದು ಆತನನ್ನು ಎತ್ತಿ ಗೂಡ್ಸ್‌ಗಾಡಿಗೆ ಹಾಕಿದರು. ಮಹಾನಗರದ ಹೆಬ್ಬಾಗಿಲು ಸಮೀಪಿಸುತಿತ್ತು. ತರಕಾರಿ ಸಾಗಿಸುವ ಆ ವಾಹನದವನು ಕರುಣಿಸಿ ಸುಸಜ್ಜಿತ ಆಸ್ಪತ್ರೆಗೆ ಸೇರಿಸಿ, 'ಈ ಅಮಾಯಕನ ಜೀವ ಉಳಿಸಿ' ಎಂದು ವಿನಂತಿಸಿದ. ಕಾಲ ಕೆಟ್ಟು ಹೋಗಿದೆ ನಿಜಾ... ಅಂಥಾದ್ದರಲ್ಲೂ ಆ ಆಸ್ಪತ್ರೆಯ ವೈದ್ಯರು ಅನಾಥರ ರಕ್ಷಣೆಗೆ ಎಂದು ಇದ್ದ ನಿಯಮದಡಿ ಅವನ ಜೀವ ಉಳಿಸಲು ಹೆಣಗಾಡಿದರು. ಅವನ ಕಾಲುಗಳ ಕತ್ತರಿಸಲೇಬೇಕಿತ್ತು. ಹಾಗೇ ಮಾಡಿದರು.

ಬಡಪಾಯಿ ಮೇಲೆ ಕಾರು ಹರಿಸಿ ಪರಾರಿ ಆಗಿದ್ದ ಆ ಯಾವನೋ, ಸ್ಟಾರ್ ಹೋಟೆಲಿನ ಸ್ವಿಮ್ಮಿಂಗ್ ಪೂಲಿನಲ್ಲಿ ಈಜಾಡಿ ದುಬಾರಿ ಬೆಲೆಯ ವಿಸ್ಕಿ ಕುಡಿಯುತ್ತಾ ಯಾವುದೋ ಚಿತ್ತದಲ್ಲಿದ್ದ. ಬಡಪಾಯಿಗೆ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರಲಿಲ್ಲ. ವಿಪರೀತ ರಕ್ತಸ್ರಾವ ಆಗಿತ್ತು. ಜಗತ್ತಿನ ಅನಾಥ ದುರಂತಗಳಿಗೆ ಯಾರ್‍ಯಾರಿಂದ ಎಲ್ಲೆಲ್ಲಿಂದ ಹೇಗೆಲ್ಲ ಅಸಂಗತ ಸಂಬಂಧಗಳಿರುತ್ತಾವೋ ಅವನ್ನೆಲ್ಲ